ಶ್ರೀ ವಸಂತ ವಿ. ಸಾಲಿಯಾನ.—ಅಧ್ಯಕ್ಷರೇ, ಪ್ರತಿನಿತ್ಯ ಇದೇ ಉತ್ತರ ಆಗಿದೆ. ನಿನ್ನೆ ನಾನು ಕೇಳಿದ ಪ್ರಶ್ನೆಗೂ ಇದೇ ಉತ್ತರ. ಮಂತ್ರಿಗಳು ಏನು ಕೆಲಸ ಮಾಡುತ್ತಿದ್ದಾರೆ ? ಸರ್ಕಾರ ಏನು ಕೆಲಸ ಮಾಡುತ್ತಿದೆ ?

(ಗೊಂದಲ)

ಮಂತ್ರಿಗಳು ಸದನದಲ್ಲಿ ಇರುವುದೇ ಇಲ್ಲ. ಎಲ್ಲಕ್ಕೂ ಇವರು ಉತ್ತರ ತರಿಸಿಕೊಡುತ್ತೇನೆ ಎಂದು ಹೇಳುತ್ತಾರೆ.

ಅಧ್ಯಕ್ಷರು.—ನೀವೂ ೨೪ ತಾಸು ಇಲ್ಲೇ ಇರುತ್ತೀರೋ ?

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಅವರು ಪ್ರೊಫೆಸರ್, ನಾವೆಲ್ಲರೂ ಸ್ಟೂಡೆಂಟ್ಸ್ ಎಂದು ಅವರು ತಿಳಿದುಕೊಂಡಿದ್ದಾರೆಯೇ ?

(ಗೊಂದಲ)

ಅಧ್ಯಕ್ಷರು.—ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ಆರ್. ಎನ್ ನಾಯಕ್.—ಹೀಗೆ ಉತ್ತರ ಕೊಡುವುದಾದರೆ ನಿಯಮವನ್ನೇ ತಿದ್ದುಪಡಿ ಮಾಡುವುದು ಸೂಕ್ತವೆನಿಸುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಾರಿಗೆ ಮಂತ್ರಿಗಳು ವಿಧಾನಪರಿಷತ್ತಿನಲ್ಲಿ ಇದ್ದಾರೆ. ಅವರಿಂದ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಎಂ. ರಘುಪತಿ.—ನಿನ್ನೆಯಂದಿವಸ ನಿಯಮ ೩೩ಳಿಳರ ಕೆಳಗೆ ಒಟ್ಟು ೨೦ ಪ್ರಶ್ನೆಗಳು ಇದ್ದವು. ಇವುಗಳಲ್ಲಿ ೧೯ಕ್ಕೆ ನಿನ್ನೆ ಸರ್ಕಾರದಿಂದ ಉತ್ತರವನ್ನು ಕೊಡಲಾಗಿದೆ.

ಶ್ರೀ ಎಂ. ರಘುಪತಿ.—ಒಂದೇ ಒಂದಕ್ಕೆ ಉತ್ತರ ಕೊಟ್ಟಿಲ್ಲ. ಯಾವತ್ತೋ ಒಂದು ದಿನ...

ಶ್ರೀ ಜಿ. ರಾಮಕೃಷ್ಣ.—ಉತ್ತರ ಕೊಟ್ಟು ದೊಡ್ಡ ಉಪಕಾರ ಏನೂ ಮಾಡಿಲ್ಲ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ ಒಟ್ಟು ಎಷ್ಟು ೩೩ಳಿಳರ ಅಡಿಯಲ್ಲಿ ಕೇಳುವ ಸೂಚನೆಗಳನ್ನು ತಾವು ಪಟ್ಟಿಯಲ್ಲಿಟ್ಟಿದ್ದೀರಿ ಮತ್ತು ಎಷ್ಟಕ್ಕೆ ಉತ್ತರಬಂದಿತ್ತು ಎಂಬುದನ್ನು ಸದಸ್ಯರಿಗೆ ತಾವು ಮಾಹಿತಿ ಕಳಿಸಿಕೊಡಿ. ಆಗ ಅವರಿಗೆ ಅರ್ಥವಾಗುತ್ತದೆ. ಬಹುತೇಕ ಉತ್ತರಗಳನ್ನು ಕಳಿಸಿಕೊಟ್ಟಿದ್ದೇವೆ. ನೂರಕ್ಕೆ ೯೦ರಷ್ಟು ಉತ್ತರ ಕೊಟ್ಟು ಆಗಿದೆ.

ಶ್ರೀ ಮದನಗೋಪಾಲ್ ನಾಯಕ್.—ನಾನು ೩೩ರಲ್ಲಿ ಕೇಳಿದ್ದಕ್ಕೆ ಇನ್ನೂ ಉತ್ತರ ಬಂದಿಲ್ಲ.

4) ದಿನಾಂಕ 14-1-1988ರಂದು ಆಳಂದ ಪೋಲೀಸ್ ಠಾಣೆಯಲ್ಲಿ ಹೇಮಾಜಿ ಎನ್ನುವ ರೈತ ನೇಣು ಹಾಕಿಕೊಂಡು ಸತ್ತಿರುವುದು

ಶ್ರೀ ಜಿ. ರಾಮಕೃಷ್ಣ (ಕಮಲಾಪುರ) —ಮಾನ್ಯ ಅಧ್ಯಕ್ಷರೇ, ೧೪-೧-೧೯೮೮ರಂದು ಸುಮಾರು ೭೦ ವರ್ಷ ವಯಸ್ಸಿನ ಹೇಮಾಜಿ ಎಂಬ ಬಡ ರೈತನು ಹಾಡುಹಗಲೇ ಆಳಂದ ಪೋಲೀಸ್ ಠಾಣೆಯಲ್ಲಿ ನೇಣು ಹಾಕಿಕೊಂಡು ಸತ್ತಿದ್ದಾನೆಂದು ಜಿಲ್ಲೆಯ ಪೋಲೀಸ್ ಸೂಪರಿಂಟೆಂಡೆಂಟ್ ಸಹ ೧೬-೧-೧೯೮೮ ರಂದು ಪತ್ರಿಕಾ ಹೇಳಿಕೆ ನೀಡಿದ್ದರು. ಆದರೆ ಇದು ಆತ್ಮಹತ್ಯೆಯ ಪ್ರಕರಣ ವಾಗಿರದೆ ಪೋಲೀಸರು ಬೇಕೆಂದೇ ಮಾಡಿರುವ ಕೆಲಸವಾಗಿದೆ. ಕಾರಣ ಇವನು ನೇಣು ಹಾಕಿಕೊಂಡಿದ್ದ ಎಂದು ಹೇಳಿರುವ ಕೊಠಡಿಯು ಪೋಲೀಸರು ಅವರ ಪೆಟ್ಟಿಗೆಗಳನ್ನು ಇಟ್ಟುಕೊಂಡಿದ್ದ ಕೊಠಡಿಯಾಗಿದ್ದು ಅಲ್ಲಿನ ಮೂರು ಪೆಟ್ಟಿಗೆಗಳನ್ನು ಒಂದರ ಮೇಲೆ ಒಂದು ಜೋಡಿಸಿದ್ದಾಗ್ಯೂ ನೆಲದಿಂದ ೧೦ ಅಡಿ ಮೇಲಿರುವ ಕೊಕ್ಕೆಗಳು ಅವನ ಕೈಗೆ ಸಿಗಲು ಸಾಧ್ಯವಾಗುತ್ತಿಲ್ಲ. ಅಲ್ಲದೆ ಸದರಿ ಕೊಠಡಿಯಲ್ಲಿ ಸುಮಾರು ೨೨ ಅಡಿ ಇದ್ದ ಹಗ್ಗ ಎಲ್ಲಿಂದ ಬರಲು ಸಾಧ್ಯ ಮತ್ತು ಶವದ ಪಂಚನಾಮೆಯ ಸಮಯದಲ್ಲಿ ಆತನ ಮಗ ಶ್ರೀ ಅಂದಪ್ಪ

ಅವರ ಹೇಳಿಕೆಯ ಮೇರೆಗೆ ಅವನ ತಂದೆಯು ಕತ್ತಿನ ಬಲಭಾಗದಲ್ಲಿ ರಕ್ತದಿಂದ ಕಂದುಗಟ್ಟಿದ್ದು ಸೊಂಟದ ಸುತ್ತ ರಕ್ತಹರಿದು ಉಟ್ಟಿದ್ದ ದೋತರ ನೆನೆದಿದ್ದು ಎಡಭಾಗದ ಹೊಟ್ಟೆಯ ಕೆಳಗೆ ಹಾಗೂ ಎಡಭುಜದ ಮೇಲೆ ಎಂತ್ತು ಕಾಲುಗಳ ಮೇಲೆ ಹೊಡೆತದ ಗಾಯಗಳು ಇದ್ದವು ಎಂದು ತಿಳಿಸಿದ್ದಾನೆ. ಇದನ್ನೆಲ್ಲಾ ವಿಚಾರ ಮಾಡಿದಾಗ ಎಮ್ಮಾಜಿ ಸಾವು ಆತ್ಮಹತ್ಯೆಯಲ್ಲದೆ ಪೋಲೀಸರೇ ಮಾಡಿರುವ ಕೊಲೆ ಎಂದೇ ಸಂಶಯ ಪಡಬಹುದಾಗಿದೆ. ಈ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಎಂತ್ತು ಸತ್ಯಾಂಶವನ್ನು ಹೊರತರಬೇಕೆಂದು ನಾನು ಸರಕಾರವನ್ನು ೨೨-೧-೮೮ರಂದು ಪತ್ರಿಕಾ ಹೇಳಿಕೆ ಮುಖಾಲಕ ಮತ್ತು ಇಲ್ಲಿ ೨೭-೧-೮೮ರಂದು ಮನ ಸೆಳೆಯುವ ಸೂಚನೆ ಮೂಲಕ ಮಾನ್ಯ ಗೃಹಮಂತ್ರಿಗಳ ಗಮನವನ್ನು ಸೆಳೆದಿದ್ದೆ. ಮತ್ತು ಆ ಬಗ್ಗೆ ಹೇಳಿಕೆ ನೀಡಬೇಕೆಂದು ಒತ್ತಾಯಿಸಿದ್ದೆವು ಎಂತ್ತು ವೈದ್ಯಕೀಯ ಪರೀಕ್ಷೆಯ ಬಗ್ಗೆಯೂ ವರದಿ ಎರಿಸುವ ಬಗ್ಗೆ ಗಮನ ಸೆಳೆದಿದ್ದೆ. ಆದರೆ ವೈದ್ಯಕೀಯ ಪರೀಕ್ಷೆಯ ವರದಿ ಬಂದಿಲ್ಲವೆಂದು ಸದನಕ್ಕೆ ತಿಳಿಸಲಾಗಿತ್ತು. ಆದ್ದರಿಂದ ವೈದ್ಯ ಪರೀಕ್ಷೆಯಿಂದ ಕಂಡುಬಂದಿರುವ ಮಾಹಿತಿಯನ್ನು ಹಾಗೂ ಸರಕಾರದವರು ಈಗಾಗಲೇ ವಿಚಾರಣೆ ನಡೆಸಿದ್ದರೆ ವಿಚಾರಣಾ ವರದಿಯನ್ನು ಈ ಸಭೆಗೆ ತಿಳಿಸ ಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ.ಲಕ್ಷ್ಮೀಸಾಗರ್ (ಕಾನೂನು, ಹಾಗೂಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನಾನು ಒದುತ್ತೇನೆ.

ದಿನಾಂಕ ೧೩, ೧೪-೧-೧೯೮೮ರ ರಾತ್ರಿ ೬೦ ವರ್ಷದ ಹೇಮಾಜಿರಾವು ಹೊಸಳ್ಳಿ ಎಂಬುವನು ಅಳಂದೆ ತಾಲ್ಲೂಕಿನ ಹಾಡ್ಲೂರಿನ ತಮ್ಮ ಜಮೀನಿನಲ್ಲಿ ತೊಗರಿ ಬೆಳೆಯನ್ನು ಕದಿಯುತ್ತಿದ್ದನೆಂದು ಶ್ರೀ ವಿಜಯಾನಂದರವರು ದಿನಾಂಕ ೧೪-೧-೧೯೮೮ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಆಳಂದ ಪೋಲೀಸ್ ಠಾಣೆಗೆ ಹಾಜರುಪಡಿಸಿದರು. ಆತನನ್ನು ವಿಚಾರಣೆ ಮಾಡುವುದಕ್ಕೋಸ್ಕರ ವಿರಾಮ ಕೋಣೆಯಲ್ಲಿ ಕುಳ್ಳಿರಿಸಲಾಯಿತು. ಸಂಜೆ ಸುಮಾರು ೪-೦೦ ಗಂಟೆ ಸಮಯದಲ್ಲಿ ಸದರಿ ಹೇಮಾಜಿಯು ಅಲ್ಲಿದ್ದ ಸೀಲಿಂಗ್ ಫ್ಯಾನ್‌ಗೆ ಹಗ್ಗವನ್ನು ಸಿಕ್ಕಿಸಿ ನೇಣುಹಾಕಿಕೊಂಡಿರುವುದು ಕಂಡು ಬಂದಿತು. ಈ ದುರ್ಮರಣ ಮೊಕದ್ದಮೆಯನ್ನು ಆ ಠಾಣೆಯಲ್ಲಿ ದಾಖಲು ಮಾಡಿಕೊಳ್ಳಲಾಯಿತು.

೨. ದಿನಾಂಕ ೧೫-೧-೧೯೮೮ರಂದು ಬೆಳಿಗ್ಗೆ ೮-೪೫ ರಿಂದ ಮಧ್ಯಾಹ್ನ ೨-೦೦ ಗಂಟೆಯವರೆಗೆ ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರು ಮಹಜರು ನಡೆಸಿದರು. ಮಹಜರ್ ವೇಳೆಯಲ್ಲಿ (೧) ಕತ್ತಿನಲ್ಲಿ ಸುತ್ತ ಇದ್ದ ಜೀರಗುಣಿಕೆಯ ಗಾಯ (೨) ಸೊಂಟದ ಹಿಂದೆ ಪರಚಿದ ಗಾಯಗಳು (೩) ಬಲಮೊಳಕೈ ಕೆಳಗೆ ಒಂದು ಗಾಯ (೪) ಬಲಭುಜದ ಕೆಳಗೆ ಒಂದು ರಕ್ತದ ಗಾಯಗಳಾಗಿರುವುದನ್ನು ಗಮನಿಸಿದರು.

೩. ಕತ್ತಿನ ಸುತ್ತ ಇದ್ದ ಜೀರಗುಣಿಕೆ ಗಾಯವನ್ನು ಬಿಟ್ಟು ಉಳಿದ ಗಾಯಗಳು ಹೇಮಾಜಿಯನ್ನು ಹಿಡಿಯುವಾಗ ಮತ್ತು ಹಿಡಿದು ತರುವಾಗ ಊರಿನ ಜನರು ಹೊಡೆದಾಗ ಆದುವೆಂದು ತಿಳಿದು ಬಂದಿದೆ. ವೈದ್ಯರೂ ಸಹ ಇದನ್ನು ಪುಷ್ಟೀಕರಿಸಿದ್ದಾರೆ. ಮರಣೋತ್ತರ ವೈದ್ಯಕೀಯ ಪರೀಕ್ಷೆ ನಡೆಸಿದ ಇಬ್ಬರು ವೈದ್ಯರು ಹೇಮಾಜಿಯವರ ಮರಣವು ನೇಣುಹಾಕಿಕೊಂಡಿದ್ದರಿಂದ ಆಯಿತೆಂದು ಅಭಿಪ್ರಾಯ ಪಟ್ಟಿದ್ದಾರೆ.

೪. ಘಟನೆ ನಡೆದ ಕೋಣೆಯ ಒಳಮೂಳಿಗೆಯಲ್ಲಿ ಸೀಲಿಂಗ್ ನೆಲದಿಂದ ಸುಮಾರು ೧೧ ಅಡಿ ಮಾತ್ರ ಎತ್ತರದಲ್ಲಿದ್ದುದರಿಂದ, ಸುಮಾರು ೫ ಅಡಿ ೧೦ ಇಂಗುಲ ಎತ್ತರವಿದ್ದ ಹೇಮಾಜಿಗೆ ಸೀಲಿಂಗ್ ನಲ್ಲಿದ್ದ ಕೊಕ್ಕಿಗೆ ಹಗ್ಗ ಹಾಕಲು ಸಾಧ್ಯವಾಯಿತು. ಮೃತ ವ್ಯಕ್ತಿ ದೃಢಕಾಯವಾದ ವ್ಯಕ್ತಿಯಾಗಿದ್ದು ಅಷ್ಟು ಎತ್ತರ ಹತ್ತುವುದು ಅವನಿಗೆ ಸಾಧ್ಯವಾಯಿತು. ರಿಂಗ್‌ರೌಂಡ್ ಡ್ಯೂಟಿ ಜನರ ನಿಯಂತ್ರಣ ಇತ್ಯಾದಿಗಳಿಗೆ ಅವಶ್ಯಕವಾಗುವ ಉದ್ದನೆಯ ಹಗ್ಗವನ್ನು ಠಾಣೆಯ ಕೊಠಡಿಯಲ್ಲಿ ಇಡಲಾಗಿತ್ತು. ಅದೇ ಹಗ್ಗವನ್ನು ಬಳಸಿ ಮೃತನು ನೇಣು ಹಾಕಿಕೊಂಡನು.

೫. ಈ ಪ್ರಕರಣವನ್ನು ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಸಿರುತ್ತಾರೆ. ಅವರ ವರದಿ ಬಂದ ತಕ್ಷಣ ಸೂಕ್ತಕ್ರಮ ತೆಗೆದುಕೊಳ್ಳಲಾಗುವುದು.

೬. ಆಳಂದ ಪೋಲೀಸ್ ಠಾಣೆಯ ಹೆಡ್ ಕಾನ್ಸ್‌ಟೇಬಲ್ ಮತ್ತು ಪೋಲೀಸ್ ಕಾನ್ಸ್‌ಟೇಬಲ್ ಇವರುಗಳನ್ನು ಕರ್ತವ್ಯನಿರ್ಲಕ್ಷತೆಗಾಗಿ ಅಮಾನತ್ತಿನಲ್ಲಿಡಲಾಗಿದ್ದು, ಅವರ ವಿರುದ್ಧ ಇಲಾಖಾ ವಿಚಾರಣೆ ಮಾಡಲಾಗುತ್ತಿದೆ.